# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಗೋವಿಂದರಾಜು(ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1679 (1939) |
| ಉತ್ತರಿಸಬೇಕಾದ ದಿನಾಂಕ | 24.03.2026 |
| ಉತ್ತರಿಸುವ ಸಚಿವರು | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ನಗರದಲ್ಲಿ ಈಗಾಗಲೇ ಕೈಗೊಳ್ಳಲಾಗಿರುವ ಒಳಚರಂಡಿ ಕಾಮಗಾರಿಗಳು ಅವೈಜ್ಞಾನಿಕವಾಗಿದ್ದು, ಇವುಗಳನ್ನು ಸರಿಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು; ಸದರಿ ಕಾಮಗಾರಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು; | ರಾಜ್ಯ ಸರ್ಕಾರದ ಅನುದಾನದಲ್ಲಿ ಕೈಗೊಂಡಿರುವ 1ನೇ ಮತ್ತು 2ನೇ ಹಂತದ ಒಳಚರಂಡಿ ಯೋಜನೆ ಹಾಗೂ ಅಮೃತ್ 1.0 ಯೋಜನೆಯಡಿ ಕೈಗೊಂಡಿರುವ ಒಳಚರಂಡಿ ಯೋಜನೆಯ ಕಾಮಗಾರಿಗಳು ಅವೈಜ್ಞಾನಿಕವಾಗಿರುವುದಿಲ್ಲ.<br><br>ಕೋಲಾರ ನಗರದ ಭೌಗೋಳಿಕ ಮಟ್ಟಗಳ ಅನ್ವಯ ನಗರವನ್ನು ಎರಡು ಝೋನ್ ಗಳಾಗಿ ವಿಂಗಡಿಸಲಾಗಿದ್ದು, ಒಳಚರಂಡಿ ಕೊಳವೆಗಳಲ್ಲಿ ಹರಿಯುವ ತ್ಯಾಜ್ಯ ನೀರು ಗುರುತ್ವಾಕರ್ಷಣ ಕೊಳವೆ ಮಾರ್ಗದಿಂದ ವೆಟ್ ವೆಲ್ ಗೆ ಹರಿದು ನಂತರ ಏರು ಕೊಳವೆ ಮಾರ್ಗದ ಮೂಲಕ ತ್ಯಾಜ್ಯ ನೀರು ಶುದ್ಧೀಕರಣ ಘಟಕಕ್ಕೆ ಹರಿಸಿ ನೀರನ್ನು ಶುದ್ಧೀಕರಿಸಲು ವಿನ್ಯಾಸಿಸಲಾಗಿದ್ದು, ಪ್ರಸ್ತುತ ಕಾಮಗಾರಿಯ ನಿರ್ವಹಣೆಯನ್ನು ಕೋಲಾರ ನಗರಸಭೆಯಿಂದ ನಿರ್ವಹಿಸಲಾಗುತ್ತಿದ್ದು, ಕಾಮಗಾರಿಗೆ ಬಿಡುಗಡೆ ಮಾಡಿರುವ ಅನುದಾನ ಈ ಕೆಳಗಿನಂತಿದೆ:-<br><br>I. ಕೋಲಾರ ನಗರಕ್ಕೆ ಮೊದಲನೇ ಹಂತದ ಒಳಚರಂಡಿ ಯೋಜನೆಯನ್ನು ರೂ.8.14 ಕೋಟಿ ವೆಚ್ಚದಲ್ಲಿ ದಿನಾಂಕ:11.01.2011 ರಲ್ಲಿ ಪೂರ್ಣಗೊಳಿಸಿ ನಗರಸಭೆಗೆ ಹಸ್ತಾಂತರಿಸಲಾಗಿದೆ.<br><br>II. ಕೋಲಾರ ನಗರಕ್ಕೆ ಎರಡನೇ ಹಂತದ ಒಳಚರಂಡಿ ಯೋಜನೆಯನ್ನು ರೂ.14.83 ಕೋಟಿ ವೆಚ್ಚದಲ್ಲಿ ದಿನಾಂಕ:18.12.2012 ರಲ್ಲಿ ಪೂರ್ಣಗೊಳಿಸಿ ನಗರಸಭೆಗೆ |

| | | |
|---|---|---|
| | | ಹಸ್ತಾಂತರಿಸಲಾಗಿದೆ.<br><br>III. ಅಮೃತ್-1.0 ಯೋಜನೆಯಡಿ ಕೋಲಾರ ನಗರಕ್ಕೆ ಒಳಚರಂಡಿ ಕಾಮಗಾರಿಗಳನ್ನು ರೂ.73.73ಕೋಟಿ ಅಂದಾಜು ವೆಚ್ಚದಲ್ಲಿ ಕೈಗೊಂಡಿದ್ದು ಸದರಿ ಯೋಜನೆಯಲ್ಲಿ ಆಂತರಿಕ ಒಳಚರಂಡಿ ಕೊಳವೆ ಮಾರ್ಗ, ಗೃಹ ಸಂಪರ್ಕ ಹಾಗೂ ಇತರೆ ಪೂರಕ ಕಾಮಗಾರಿಗಳನ್ನು ತ್ಯಾಜ್ಯ ನೀರು ಸಂಸ್ಕರಣಾ ಘಟಕ ಹೊರತುಪಡಿಸಿ ರೂ.55.67 ಕೋಟಿಗಳ ವೆಚ್ಚದಲ್ಲಿ ದಿನಾಂಕ: 24.05.2022 ರಂದು ಪೂರ್ಣಗೊಳಿಸಲಾಗಿದೆ.<br><br>ಮುಂದುವರೆದಂತೆ, ಕೆ.ಯು.ಐ.ಡಿ.ಎಫ್.ಸಿ. ವತಿಯಿಂದ, ಕೋಲಾರ ನಗರಕ್ಕೆ ಜಲಶುದ್ಧಿ ಅಭಿಯಾನ ಯೋಜನೆಯ ಅಡಿಯಲ್ಲಿ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಪ್ರಾಧಿಕಾರ ಪರಿಸರ ಪರಿಹಾರ ನಿಧಿಯಡಿ ರೂ.60.00 ಕೋಟಿಗಳ ಅನುದಾನವು ಒಳಚರಂಡಿ ಉನ್ನತೀಕರಣ ಹಾಗೂ ತ್ಯಾಜ್ಯನೀರು ಸಂಸ್ಕರಣ ಘಟಕ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಅನುಮೋದನೆಗೊಂಡಿರುತ್ತದೆ.<br><br>ಸದರಿ ಅನುದಾನದಲ್ಲಿ ವಿಸ್ತೃತ ಯೋಜನೆಯನ್ನು ಒಳಚರಂಡಿ ಉನ್ನತೀಕರಣ ಹಾಗೂ ತ್ಯಾಜ್ಯನೀರು ಸಂಸ್ಕರಣ ಘಟಕ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳುವ ಸಲುವಾಗಿ ಸಿದ್ಧಪಡಿಸಿ ಸಂಬಂಧಪಟ್ಟ ಸಮಿತಿಗಳಿಂದ ಅನುಮೋದನೆ ಪಡೆದು ಟೆಂಡರ್ ಆಹ್ವಾನಿಸಲಾಗಿದ್ದು ತಾಂತ್ರಿಕ ಬಿಡ್ ತೆರೆಯಲಾಗಿರುತ್ತದೆ.<br><br>ಪ್ರಸ್ತುತ ಟೆಂಡರ್ ಪ್ರಕ್ರಿಯೆಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ಇದ್ದು, ತಡೆಯಾಜ್ಞೆ ತೆರವುಗೊಂಡ ನಂತರ ಕಾಮಗಾರಿಯನ್ನು ಕೈಗೊಳ್ಳಲು ಕ್ರಮವಹಿಸಲಾಗುವುದು. |
| ಆ) | ಈ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸದೇ ಇರುವುದರಿಂದ ಒಳಚರಂಡಿಗಳು ತುಂಬಿ, ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿದ್ದು ಇದರಿಂದ ಪಟ್ಟಣದ ರಸ್ತೆಗಳಲ್ಲಿ ಕೊಳಚೆ ನೀರು ಹರಿದು | ಒಳಚರಂಡಿ ಕೊಳವೆ ಮತ್ತು ಛೇಂಬರ್‌ಗಳ ಬ್ಲಾಕ್ ಆಗಿ ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿರುವ ಸಂಧರ್ಭಗಳಲ್ಲಿ ಪರ್ಯಾಯವಾಗಿ ನಗರಸಭೆ ನಿಧಿಯಿಂದ ಪ್ರತ್ಯೇಕವಾಗಿ ವಾರ್ಷಿಕ ನಿರ್ವಹಣೆ ಟೆಂಡರ್ ಆಹ್ವಾನಿಸಲಾಗಿದ್ದು, ಕಾಲಕಾಲಕ್ಕೆ ಒಳಚರಂಡಿ ಹೆಚ್ಚುವರಿ ಕೊಳವೆ, |

| | | |
|---|---|---|
| | ಸೊಳ್ಳೆಗಳು ಉತ್ಪತ್ತಿಯಾಗಿ ಸಾರ್ವಜನಿಕರ ಆರೋಗ್ಯದ ಮೇಲೆ ವ್ಯತಿರಿಕ್ತ ಪ್ರಭಾವ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಛೇಂಬರ್‌ಗಳ ದುರಸ್ತಿ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿರುತ್ತದೆ.<br><br>ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (NGT) ಪರಿಸರ ಪರಿಹಾರ ನಿಧಿಯಿಂದ Used Water Management ಯೋಜನೆಯಡಿಯಲ್ಲಿ ಕೆ.ಯು.ಐ.ಡಿ.ಎಫ್.ಸಿ ವತಿಯಿಂದ ಅಂದಾಜು ಮೊತ್ತ ರೂ.60.00 ಕೋಟಿ ವೆಚ್ಚದಲ್ಲಿ ಕೋಲಾರ ನಗರ ವ್ಯಾಪ್ತಿಯಲ್ಲಿ ಬಿಟ್ಟು ಹೋಗಿರುವ ಕೊಳವೆ ಮಾರ್ಗ ಮತ್ತು ಹೊಸ ಕೊಳವೆ ಮಾರ್ಗ ಹಾಗೂ ತ್ಯಾಜ್ಯ ನೀರು ಶುದ್ಧೀಕರಣ ಘಟಕ ದುರಸ್ತಿ ಒಳಗೊಂಡಂತೆ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಯಲ್ಲಿ ಇರುತ್ತದೆ. |
| ಇ) | ಸಾರ್ವಜನಿಕ ಮಹತ್ವವುಳ್ಳ ಕಾಮಗಾರಿಗಳನ್ನು ಸಮರ್ಪಕವಾಗಿ ನಿರ್ವಹಿಸದ ನಗರಸಭೆ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; | |
| ಈ) | ಈ ನಗರದಲ್ಲಿ ಒಳಚರಂಡಿಯಿಂದ ಕೊಳಚೆ ನೀರು ತುಂಬಿ ರಸ್ತೆ ಮೇಲೆ ಹರಿಯುತ್ತಿರುವ ಮಾರ್ಗಗಳ ದುರಸ್ತಿಗೆ ಸರ್ಕಾರ ಕೈಗೊಂಡ ಕ್ರಮಗಳೇನು? | |

ಸಂಖ್ಯೆ:ನಅಇ 55 ಯುಎಂಎಸ್ 2026

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು.